UNIVERSAL LIBRARY
OU_200905
UNIVERSAL LIBRARY

**OSMANIA UNIVERSITY LIBRARY**

Call No. K 81·6 G18N    Accession No. K 455

Author ಗುಂಡಪ್ಪ. D.V.

Title ನಿವೇದನ. 1924

This book should be returned on or before the date last marked below.



" ಲತೆಯೊಡನೆ ಬಳುಕಿ ನೀಂ ನೃತ್ಯ ಲಾಸ್ಯದಿನಾರನೊಲಿಸುತಿರುವೆ "

# ನಿವೇದನ

ಡಿ. ವಿ. ಗುಂಡಪ್ಪನವರಿಂದ
ವಿರಚಿತವಾದುದು

ಕರ್ಣಾಟಕ ಸಂಘ
ಸೆಂಟ್ರಲ್ ಕಾಲೇಜು, ಬೆಂಗಳೂರು

# ಮುನ್ನುಡಿ

ಕನ್ನಡಿಗರಲ್ಲಿ ಸ್ವಭಾಷಾಭಿಮಾನ ಸ್ವದೇಶಾಭಿಮಾನಗಳನ್ನೂ ಸಾಹಿತ್ಯಾಭಿರುಚಿಯನ್ನೂ ಕೂಡಿದ ಮಟ್ಟಿಗೂ ಅಭಿವೃದ್ಧಿಪಡಿಸಬೇಕೆಂಬ ಉದ್ದೇಶದಿಂದ **ಕರ್ಣಾಟಕ ಸಂಘವು** ಈಗ ಐದು ವರ್ಷಗಳಿಂದಲೂ **ಪ್ರಬುದ್ಧ ಕರ್ಣಾಟಕ**ವೆಂಬ ಪತ್ರಿಕೆಯನ್ನು ಪ್ರಕಟಗೊಳಿಸುತ್ತಿರುವುದು. ಈ ಉದ್ದೇಶ ಸಾಧನೆಗಾಗಿಯೇ, ಸಮಯವೂ ಅನುಕೂಲ್ಯವೂ ದೊರೆತಾಗ, ಉತ್ತಮವಾದ ಗ್ರಂಥಗಳನ್ನೂ ಪ್ರಕಟಿಸಬೇಕೆಂದು **ಸಂಘವು** ಸಂಕಲ್ಪಿಸಿರುವುದು. ಹಿಂದೆ **ವಸಂತ ಕುಸುಮಾಂಜಲಿ**ಯೆಂಬ ಕವಿತೆಗಳ ಪುಸ್ತಕವೊಂದನ್ನು ಉತ್ತಮ ರೀತಿಯಲ್ಲಿ ಮುದ್ರಣ ಮಾಡಿಸಿ ನಮ್ಮ ಚಂದಾದಾರರಿಗೂ ಪೋಷಕರಿಗೂ ಉಚಿತವಾಗಿ ಅರ್ಪಿಸಿದ್ದೆವಷ್ಟೆ. ಅದರ ವಿಷಯದಲ್ಲಿ ಅನೇಕ ಮಂದಿ ಸಹೃದಯರಾದ ವಾಚಕರು ತಮ್ಮ ಮೆಚ್ಚುಗೆಯನ್ನು ತೋರ್ಪಡಿಸಿದುದರಿಂದ, **ನಿವೇದನ**ವೆಂಬ ಈ ಕವಿತೆಗಳ ಪುಸ್ತಕವನ್ನು ಕನ್ನಡಿಗರಿಗೆ ಈ ವರ್ಷ ಅರ್ಪಿಸಬೇಕೆಂಬ ಕುತೂಹಲವು ನಮಗುಂಟಾಯಿತು. ಈ ಪುಸ್ತಕವೂ ಭಾಷಾಭಿಮಾನಿಗಳಾದ ನಮ್ಮ ಕರ್ಣಾಟಕ ಬಾಂಧವರ ಆದರಣೆಗೆ ಪಾತ್ರವಾದೀತೆಂದು ನಿರೀಕ್ಷಿಸಿರುವೆವು.

ಈ ಸಣ್ಣ ಪುಸ್ತಕದ ಮೊದಲನೆಯ ಭಾಗದಲ್ಲಿ ಮೈಸೂರು ಪ್ರಾಂತದಲ್ಲಿಯ ಸ್ವಭಾವಸಿದ್ಧವಾದ ಮತ್ತು ಮನುಷ್ಯಕೃತವಾದ ಕೆಲವು ಪ್ರಖ್ಯಾತ ದೃಶ್ಯಗಳನ್ನು ವರ್ಣಿಸುವ ಕವಿತೆಗಳಿವೆ. ಈ ದೃಶ್ಯಗಳ ಸೊಬಗನ್ನು ಸ್ವಲ್ಪ ಮಟ್ಟಿಗಾದರೂ ಕಣ್ಣಿಗೆ ತೋರಿಸುವ ಉದ್ದೇಶದಿಂದ ಚಿತ್ರಪಟಗಳನ್ನು ಕೊಟ್ಟಿದೆ. ಎರಡನೆಯ ಭಾಗದಲ್ಲಿ ಭಕ್ತಿರಸ ಪ್ರಧಾನವಾದ ಕೆಲವು ಗೀತಗಳಿವೆ.

## ಈ ಲೇಖಕರ ಇತರ ಗ್ರಂಥಗಳು

ವಸಂತ ಕುಸುಮಾಂಜಲಿ

ವಿದ್ಯಾರಣ್ಯ ವಿಜಯ

ತಿಲೋತ್ತಮೆ

ಕನಕಾಲುಕಾ

ವಿದ್ಯಾರಣ್ಯ ಚರಿತ್ರೆ

ದಿವಾನ್ ರಂಗಾಚಾರ್ಲು

ಗೋಪಾಲ ಕೃಷ್ಣ ಗೋಖಲೆ

ಸಾಹಿತ್ಯ ಮತ್ತು ಜನಜೀವನ

—ಮೊದಲಾದುವು

ಕರ್ಣಾಟಕ ಪ್ರಕಟನಾಲಯ

ಬಸವನಗುಡಿ, ಬೆಂಗಳೂರು ಸಿಟಿ

(*All rights reserved by the Author*)

ಈ ಕವಿತೆಗಳನ್ನು ಈ ರೂಪದಲ್ಲಿ ಪ್ರಕಟಿಸಲು ಅನುಮತಿಯನ್ನಿತ್ತುದಕ್ಕಾಗಿ ಸಂಘದ ಹಿತಚಿಂತಕರೂ ಕಾವ್ಯಕರ್ತೃಗಳೂ ಆದ ಮ|| ರಾ|| ಡಿ. ವಿ. ಗುಂಡಪ್ಪನವರಿಗೆ ನಾವು ಕೃತಜ್ಞರಾಗಿರುವೆವು.

ಚಿತ್ರಪಟಗಳ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾಲಯದ ಅಧಿಕಾರಿಗಳೂ ಇತರ ದೊಡ್ಡ ಮನುಷ್ಯರೂ ನಮಗೆ ಸಹಾಯ ಮಾಡಿರುವರು.

ಸೆಂಟ್ರಲ್ ಕಾಲೇಜು,
ಬೆಂಗಳೂರು.
ಶ್ರೀರಾಮ ನವಮಿ, ರಕ್ತಾಕ್ಷಿ ಸಂ||

**ಬೆಳ್ಳಾವೆ ವೆಂಕಟನಾರಾಯಣಪ್ಪ,**
ಅಧ್ಯಕ್ಷ,
**ಕರ್ಣಾಟಕ ಸಂಘ.**

# ವಿ ಜ್ಞಾ ಪ ನೆ

ತನ್ನ ದೇಶದಲ್ಲಿ ಪ್ರಕೃತಿ ನಿರ್ಮಿತಗಳಾಗಿಯೂ ಮನುಷ್ಯ ನಿರ್ಮಿತಗಳಾಗಿಯೂ ಖ್ಯಾತಿಗೊಂಡಿರುವ ದೃಶ್ಯ ವಿಶೇಷಗಳನ್ನು ಮೊಟ್ಟಮೊದಲು ನೋಡಿದಾಗ ತನಗೆ ಲಭಿಸಿದ ಆನಂದವು ಆಗಾಗ ತನ್ನ ನೆನಪಿಗೆ ದೊರೆಯುವಾಗುವಂತೆ ಅದನ್ನು ಮಾತುಗಳಲ್ಲಿ ಸಂಗ್ರಹಿಸಿಟ್ಟುಕೊಳ್ಳಬೇಕೆಂದು ಲೇಖಕನು ಮಾಡಿದ ಪ್ರಯತ್ನದ ಫಲವೇ ಈ ಪುಸ್ತಕದಲ್ಲಿಯ ಪದ್ಯಗಳು. ಆ ಆನಂದವು ಅವನಿಗೆ ಎಂತಹ ಸನ್ನಿವೇಶದಲ್ಲಿ ದೊರೆಯಿತೆಂಬುದನ್ನು ಇಲ್ಲಿ ಸೂಚಿಸುವುದು ಯುಕ್ತವಾಗಿದೆ. ಭಾರತ ದೇಶ ಸೇವಕ ಸಂಘದ ಅಧ್ಯಕ್ಷರೂ ಸುಪ್ರಸಿದ್ಧರೂ ಆದ ಶ್ರೀಮಾನ್ ರಾಜಮಾನ್ಯ (ರೈಟ್ ಆನರಬಲ್) ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳವರು ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ಆರೋಗ್ಯ ಸಂಪಾದನೆಗಾಗಿ ಬೆಂಗಳೂರಿಗೆ ದಯಮಾಡಿದ್ದಾಗ, ನಮ್ಮ ಶ್ರೀಮನ್ಮಹಾರಾಜರವರು ಅವರನ್ನು ಮೈಸೂರಿಗೆ ಬರಮಾಡಿಕೊಂಡು ಆದರಿಸಿದುದಲ್ಲದೆ, ನಮ್ಮ ಸಂಸ್ಥಾನದಲ್ಲಿ ನೋಡಲರ್ಹವೆನಿಸಿರುವುದನ್ನೆಲ್ಲ ಅವರು ನೋಡಬರಲು ಆಗುವಂತೆ ಏರ್ಪಡಿಸಿದರು. ಅದರಂತೆ ಸಂಚಾರ ಬೆಳಸಿದಾಗ ಅವರು ತಮ್ಮ ವಾತ್ಸಲ್ಯಕ್ಕೆ ಪಾತ್ರನಾಗಿದ್ದ ಈ ಲೇಖಕನನ್ನು ಜತದೆ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದರು. ಆಗ ನೋಡಿದ ನೋಟಗಳ ರಮ್ಯತೆಯು ಲೋಕ ಪ್ರಸಿದ್ಧವಾದುದು. ಎಂತಹ ಸಂದರ್ಭದಲ್ಲಿಯೂ ಅದು ಆನಂದವನ್ನು ಕೊಡತಕ್ಕುದೇ. ಆದರೆ ಶ್ರೀಮಾನ್ ಶ್ರೀನಿವಾಸಶಾಸ್ತ್ರಿಗಳವರಂತೆ ಪ್ರಾಜ್ಞರೂ ರಸಿಕರೂ ಆದವರ ಸಾನ್ನಿಧ್ಯದ ಮಹಿಮೆಯಿಂದ ಅವುಗಳ ಆನಂದವು ಮತ್ತಷ್ಟು ಹೆಚ್ಚಾಗಿ ಅನುಭವಕ್ಕೆ ಗೋಚರಿಸುವುದು.

ಬೇಲೂರಿನ ಶಿಲಾವಿಗ್ರಹಗಳನ್ನು ಕುರಿತ ಕವಿತೆಯ ವಿಚಾರವಾಗಿ ಒಂದು ಮಾತು ಹೇಳಬೇಕಾಗಿದೆ. ಆ ಅದ್ಭುತ ಶಿಲ್ಪ ಕೃತಿಯು ಕೀಟ್ಸ್ (Keats) ಮಹಾಕವಿಯ "ಓಡ್ ಆನ್ ಎ ಗ್ರೀಷಿಯನ್ ಅರ್ನ್" (Ode on a Grecian Urn) ಎಂಬ ಪದ್ಯಗಳಲ್ಲಿಯ ಸೌಂದರ್ಯ ಪ್ರಶಂಸೆಯನ್ನು ಜ್ಞಾಪಕಕ್ಕೆ ತಂದಿತು. ಆ ಪ್ರಖ್ಯಾತ ಕವಿಯ ಪ್ರಸಾದವು ಇಲ್ಲಿಯ ಪದ್ಯಗಳಲ್ಲಿ ಕೆಲವು ಕಡೆ ಕಾಣಬರುವುದಾಗಿರಬಹುದು.

ಈ ಕವಿತೆಗಳಲ್ಲಿ 'ಜೋಗದ ಜಲಪಾತ,' 'ಶಿವನ ಸಮುದ್ರ,' 'ಕೊಡಗಿನ ಬೆಡಗು' ಎಂಬುವು ಮೊದಲು 'ಕರ್ಣಾಟಕ ಜನಜೀವನ ಮತ್ತು ಅರ್ಥಸಾಧಕ ಪತ್ರಿಕೆ' ಯಲ್ಲಿ ಪ್ರಕಟವಾಗಿದ್ದುವು; 'ಬಲಿ ಚಕ್ರವರ್ತಿ' ಎಂಬುದೂ ಗೀತಗಳಲ್ಲಿ ನಾಲ್ಕೂ 'ಪ್ರಬುದ್ಧ ಕರ್ಣಾಟಕ' ದಲ್ಲಿ ಪ್ರಕಟವಾಗಿದ್ದುವು.

ಲೇಖಕನು ಮುಖ್ಯವಾಗಿ ತನ್ನ ಮನಸ್ತೃಪ್ತಿಗೋಸ್ಕರ ಬರೆದುವು ಈ ಕವಿತೆ ಗೀತಗಳು. ಅವು ಪುಸ್ತಕರೂಪವನ್ನು ತಾಳಿ ಮಹಾಜನರ ಆದರಣೆಯನ್ನು ಬಯಸಲು ತಕ್ಕುವಾಗಿವೆಯೆಂಬ ಭರವಸೆಯು ಸದ್ಯಃ ಅವನಿಗೆ ಹುಟ್ಟಿರಲಿಲ್ಲ. ಹಿಂದೆ ಅವನ ಕೃತಿಯ ವಿಷಯದಲ್ಲಿ ವಿಶ್ವಾಸ ತೋರಿದ ಪರಮ ಮಾನ್ಯರಾದ ಮಿತ್ರರೇ ಇದನ್ನೂ ಪೋಷಿಸುವ ಭಾರವನ್ನು ತಾವಾಗಿ ವಹಿಸಿರುವರು. ಉಪಕಾರ ಮಾಡುವುದೇ ಅವರ ಸ್ವಭಾವವೆಂಬುದೇನೋ ಸ್ಪಷ್ಟವಾಗಿದೆ. ಆದರೆ ಅಂತಹವರ ವಿಶ್ವಾಸಕ್ಕೆ ತಕ್ಕಷ್ಟು ಯೋಗ್ಯತೆಯು ಇದರಲ್ಲಿರುವುದೆಂದು ತಿಳಿಯಲು ವಾಚಕ ಮಹಾಶಯರ ದಯೆಯಿಲ್ಲದೆ ಆಗದು.

ಶಂಕರಪುರ, ಬೆಂಗಳೂರು.
೧೩ ನೆಯ ಏಪ್ರಿಲ್ ೧೯೨೪.

ಡಿ. ವಿ. ಗುಂಡಪ್ಪ

# ವಿಷಯಾನುಕ್ರಮಣಿಕೆ


| | ಕವಿತೆಗಳು | ಪುಟ |
|---|---|---|
| ೧ | ನಿವೇದನ | ೧೧ |
| ೨ | ಕೊಡಗಿನ ಬೆಡಗು | ೧೫ |
| ೩ | ಜೋಗದ ಜಲಪಾತ | ೧೯ |
| ೪ | ಕೃಷ್ಣರಾಜ ಸಾಗರ | ೨೩ |
| ೫ | ಚಾಮುಂಡಿಯ ದೀಪಗಳು | ೨೫ |
| ೬ | ಶಿವನ ಸಮುದ್ರ | ೨೭ |
| ೭ | ಬಾಬಾಬುಡನ್ ಬೆಟ್ಟ | ೩೧ |
| ೮ | ಬಲಿ ಚಕ್ರವರ್ತಿ | ೩೫ |
| ೯ | ಬೇಲೂರಿನ ಶಿಲಾ ಬಾಲಿಕೆಯರು | ೩೭ |
| ೧೦ | ಗೋಮಟೇಶ್ವರ | ೪೫ |
| | **ಗೀತೆಗಳು** | |
| ೧೧ | ನಿನ್ನ ವಿಲಾಸ | ೪೯ |
| ೧೨ | ವನ ಸುಮ | ೫೦ |
| ೧೩ | ಚಿನ್ನದು ಯಾವುದು | ೫೧ |
| ೧೪ | ನಿನ್ನ ನಾಟಕ | ೫೨ |
| ೧೫ | ಸ್ವಾತಂತ್ರ್ಯವೇಕೆ | ೫೩ |
| ೧೬ | ದಾರಿಗರ ಹಾಡು | ೫೪ |



''ವಸ್ತು ಚಿಪುವನಿಂತು ರಚಿಪ ಶಿಲ್ಪಿವರ್ಯನಾರ್''

ಶ್ರೀಃ

# ನಿ ವೇ ದ ನ

(ಖಂಡ ಭೋಗ ಷಟ್ಪದಿ)

೧

ಮೇಲೆ ನೋಡೆ ಕಣ್ಣ ತಣಿಪ
ನೀಲ ಪಟದಿ ವಿವಿಧ ರೂಪ
ಜಾಲಗಳನು ಬಣ್ಣಿಸಿರ್ಪ
ಚಿತ್ರ ಚತುರನಾರ್ ।
ಕಾಲದಿಂದೆ ಮಾಸದಾವಿ
ಚಿತ್ರವೆಸಪನಾರ್ ॥

ಸುತ್ತ ಪೊಳೆವ ಶೈಲಗಣದ
ಕೊತ್ತಲಂಗಳಿಟ್ಟು ಕಡಲ
ಸುತ್ತುಗಟ್ಟಿ ಕೋಟೆಯಿಂದನು
ಕಲ್ಪಿಸಿರ್ಪನಾರ್ ।
ವಸ್ತುಚಯವನಿಂತು ರಚಿಪ
ಶಿಲ್ಪಿವರ್ಯನಾರ್ ॥

ಗಿರಿಯ ತೊರೆಯ ಬನದ ಹೊಲದ
ಚೆರಗಿನಿಂದೆ ಮೃಗದ ಖಗದ
ಸರಗಳಿಂದಲೀ ವಿಹಾರ
ಭವನವೆಸಪನಾರ್ ।
ಮರೆಯುಲಿರ್ದು ಸೊಗವನಿಂತು
ಕವಿಸುತಿರ್ಪನಾರ್ ॥

ಜ್ಯೋತಿಗಳನು ಗಗನ ತಳದಿ
ಗೀತಗಳನು ವಿಹಗ ಮುಖದಿ
ಪ್ರೀತಿಗಳನು ಜನದ ಮನದಿ
ತೋರುತಿರ್ಪನಾರ್ ।
ಮಾತನುಳಿದ ಕವಿತೆಯಿಂತು
ಬೀರುತಿರ್ಪನಾರ್ ॥

ಅವನ ಕೃತಿಯ ನೋಡಿ ಮಣಿವೆ
ಅವನ ರವವ ಕೇಳಿ ನಲಿವೆ
ಅವನ ಭಿಕ್ಷೆಯುಂಡು ಬೆಳೆವೆ
ಅವನನರಿಯೆವು ।
ಅವನ ಲೀಲೆಗಳನು ಕಾಣ್ಬೆ
ಅವನ ಕಾಣೆವು ॥

ರವಿಗೆ ಬೆಳಕ ಭುವಿಗೆ ಜಲವ
ಜನವ ವಾಯುಗೀವ ತೆರದಿ
ಕವಿಯ ವಚನಕವನೆ ಸರಸ
ಭಾವವೀವನು ।
ಅವನೆ ಶಿಲ್ಪ ಚಿತ್ರ ಕೃತಿಗೆ
ಜೀವವೀವನು ॥

ಹಿಡಿದು ಗುರುವೆನುತ್ತಲಾತ
ನಡಿಯ ಮನದೊಳವನ ಬಲದೆ
ನುಡಿಯುಲಿತ ಕವಿಯೆ ಜಗದಿ
ಪರಮ ಧನ್ಯನು ।
ಮಂತುಮನನಗೆ ನಲಿವ ಶಿಲ್ಪಿ
ವರನೆ ಗಣ್ಯನು ॥

ಮನಕೆ ತೋರ್ಪ ಸೊಬಗನೆಲ್ಲ
ತನಗೆ ತುಷ್ಟಿಯಿಷ್ಟ ತೆರದಿ
ಜನಕೆ ನುಡಿಯಲರಿವ ಸುಕವಿ
ತಿಲಕನಾತನು ।
ಅನುಭವಿಸಿಂದ ಬರೆವ ಕಲೆಯು
ಕಲಿತನಾತನು ॥

೨

ಅರಿತು ಗುರುವಿನೊಲುಮೆಯಿಲ್ಲ
ಮರಿತು ಮತಿಯೊಳಿನಕ ಬಿಲ್ಲ
ಬರಿಸು ಬಕುತಿ ಮಾತ್ರನೆನ್ನ
ನುಡಿಸುತಿರ್ಪುದು ।
ಬನುಮ ಬುಟಿಯು ಮುಮುತೆ ಬಾಯು
ನುಡಿಸುತಿರ್ಪುದು ॥

ಕುನ್ನತಾಡಿಲಸನು ಮುಸಕು
ಗನ್ನಬಯಲು ತೋರಲೀಸನು
ಪೆನ್ನ ಕಬ್ಬುವಿದನು ಬುಧರು
ಬರೆದು ನಗುವರೇಂ ।
ನನ್ನಯುಂದೆ ಕನೆಯುರಯಿ
ಒಲಿಯುರೊಳಿಯುರೇಂ ॥

೩

ಎನ್ನ ಮನೆಯೊಳಿನದ ಬೆಳಕೆ
ಎನ್ನ ಬದುಕಿನೊಂದು ಸಿರಿಯೆ
ಕಿನ್ನರಿರಿಸು ಯರುಷಗೊಳಿಸೆ
ಬರೆದ ಬರಹನ ।
ಇನ್ನದೆಂತು ನೋಡಿ ನಗುತ
ಲೋರೆವೆ ನರಸನ ॥

ಕಿರಿಯ ಮುತ್ತುಕಳುವ ದನಿಗೆ
ಹಿರಿಯುರಿಪುವ ಕಣ್ಣ ಪನಿಗೆ
ಕರಗದಿದೆಯು ಮುಖಯು ಬಾಗು
ಕವಿತೆಗೊಳಿಪನೇಂ ।
ಮರುಳು ಮುಖಯುಸಿದನು ನಿನ್ನ
ಕಿವಿಯೊಳುಲಿಪನೇಂ ॥

ಇರಲಿ—ಬಗಿಬ ಬನರು ಕಣ್ಣ
ದೊರೆಯುದೊಂದ ನೆನದು ಕುಸುಮ
ಮರಿ ಪೂಜೆಗೈದೆನೆಂದು
ನಲವ ತಾಳ್ದುಪೋತಾ ।
ಕೊರಗಿ ನಿನ್ನ ನೆನೆಸಿಗದನು
ನಲಿಪನಕ್ಕ್ರಯೊಕಾ ॥

ನೆನಪು ನಿನ್ನ ಬಾಳ್ತೆಯುಮಾಲ
ಗುಣದ ಸೊಬಗ ಪಡೆಯುತಾಗ
ಮಣಿಯು ಮುಸುಸಿಯೊಡನೆ ಕೂಡಿ
ಮುರುಗುವಂದವು ।
ಪದಿ ಸುರಭಿ ಕಲ ರಸಂಗ
ಕೆರುವ ಚೆಂದವು ॥

ದೈವ ಕೃತಿಯು ಸೊಬಗ ಸರಸ
ಭಾವತತಿಯು ಸೊಬಗ ಸುಜನ
ಜೀವ ಕಥೆಯು ಸೊಬಗ ಬರಿಯ
ಕನಸವೆಂಬರೇಂ ।
ಜೀವ ಮನಸ ಸೊಬಗಿನೊಂದು
ನೆನಪೆ ತಣಿಸದೇಂ ॥

# ಕೊಡಗಿನ ಬೆಡಗು

## ತಲಕಾವೇರಿಯ ಬಳಿ—ಬ್ರಹ್ಮಗಿರಿಯ ಮೇಲಿನಿಂದ

---

(ಕಂದ)


ಜಡಿಯಂದ್ಭುತ ಕಾಯಾನಾಂಗಣ ।
ಬಿಂದು ಸೃಷ್ಟಿಯ ರತ್ನಪೇಟಿಯೆಲ್ಲದೊಡಂತೆ ॥
ಗ್ರದ ಚಿತ್ರದ ಸೌಂದರ್ಯವೇಂ ।
ಪ್ರಬಸೀ ಗಿರಿ ಕಂದರಾಟವೀ ವಿಭವಂಗಳ್ ॥

ಈ ವಿಭವಮುಮಿವಾ ಬೆಡಗುಂ ।
ಭಾವೋತ್ಕರ್ಷವನೊಡರ್ಚುವೀ ರಮ್ಯತೆಯುಂ ॥
ದೈವ ಪ್ರಸಾದ ಲಹರಿಯು ।
ಕಾವೇರಿಯು ಜನನ ಸದನಕಲ್ಲದೆ ಸರಿಯೇಂ ॥

(ವೃತ್ತ)

ಘನವನ ಕುಂತಳಾಳಿಸೀ ಗಿರಿಯ ನಾಥೆಯುಮಾಗಿ ತನ್ನ ವಕ್ತ್ರಮಂ ।
ಜಪದ ಪರಿಭ್ರಮಂಗೊಳಿಸೆ ಪುಟ್ಟಿದ ಮತ್ಸರದಿ ಬಾಲೆಮೇನಿಸಿ ॥
ಸ್ಪ್ರವೋಲಿಸೆಯುತ್ತಮುಪ್ಪುರಿಲದರೆಸ್ಸಿಯೊಳ್ ವಸತೋಘ ವರ್ಜಿತ ।
ಪ್ರವಲಯ ಪಂಕ್ತಿಯುದ್ಯರಿಯ ಮೇರುತ ಲೋಚನವೋದುಮನ್ನಗಂ ॥

ಜಲಧಿಯನನುಕರಿಸುವನಿಂ ।
ದಿಳೆಯುಂ ತಾಂ ಕರಗಿ ಹರಿದು ನೆರೆ ಮೇಗುತ್ತೆ ಪೇ ॥
ರಲೆಗಳ ತಳೆದಿರ್ಪಂದದಿ ।
ವಿಲಸಿಪ್ಪುವಾ ವಿಪುಲ ಶೈಲ ಸರಣಿಯ ಸಾಲ್ಗಳ್ ॥
ಧರಣಿಯ ಸುಕೃತ ಜಯಂಗಳ್ ।
ಗಿರಿ ಶಿಖರಂಗಳನಡರ್ದು ಸುರಪದಕಲ್ಲಿಂ ॥



" ನಡೆದು ನೋಡು ಕೊಡಗಿನ ಬೆಡಗಂ "

ತೆರಳುವುವೇನೆನಿಪಂದದಿ ।
ಮೆರೆದಪುದಾ ಧವಳ ಮೇಘ ಮಂಡಲ ವಿಸರಂ ॥

(ಸೀಸ)

ವಿಶ್ವಶಿಲ್ಪಿಯು ಚಿತ್ರ ಚಾತುರಿಯು ಬಗೆಗೊಳಿಪ
ವಿವಿಧ ವರ್ಣಾಕಾರ ಪಟಲದಿಂದಂ ।
ಸ್ವಾತಂತ್ರ್ಯ ಸಾಮ್ರಾಜ್ಯ ಗರ್ವಚೇಷ್ಟಿತಮೆನಿಪ
ಶಾಖೋಪಶಾಖಾ ಪ್ರತಾನದಿಂದಂ ।
ಮಂದ ಪರಿಮಳಿತ ಶೀತಲ ವಾತ ಸಂಚಲಿತ
ಕುಸುಮ ಕಿಸಲಯ ಫಲಪ್ರಸರದಿಂದಂ ।
ಶಬ್ದಸರ್ಗಸ್ವಾವತಾರಮೆಂದೆನಿಪ ಮೃಗ
ವಿಹಗ ಕೀಟಕ ಕೋಟಿ ನಾದದಿಂದಂ ॥
ಸೊಗಯಿಪಾ ತರುಗುಲ್ಮ ಲತೆಗಳಿಂ ನಿಬಿಡಮಾಗಿ ।
ರವಿಯುನವಗಡಿಸಿ ಯೋಜನಶತವನಿಂಬುಗೊಳಿಸಿ ।
ಸೃಷ್ಟಿಮಹಾತ್ಮ್ಯ ಸಂಸ್ಫೂರ್ತಿ ಪ್ರದಾತೃವೆನಿಸಿ ।
ಕೀರ್ತಿವಡೆದುದಾ ಮಹಾರಣ್ಯ ಸರಣಿಯಿತ್ತಲ್ ॥

(ಕಂದ)

ಗಿರಿಗಳ ಕಂದರಗಳ ನಿ ।
ರ್ಝರಿಗಳ ವಿಪಿನಗಳ ವಕ್ರ ಪಥಗಳ ದರ ಸುಂ ।
ದರ ಶಮಕರ ರೂಪಂಗಳ ।
ನರಿವೊಡೆ ನೀಂ ನಡೆದು ನೋಡು ಕೊಡಗಿನ ಬೆಡಗಂ ॥

ಪ್ರಕೃತಿಯು ನರ್ತನ ರಂಗಂ ।
ಸುಕೃತಾತ್ಮರಿಗದುವೆ ಲೋಚನೋತ್ಸವರಂಗಂ ॥
ಅಕೃತಕ ಕವಿತಾ ರಂಗಂ ॥
ವಿಕೃತಮನಸ್ಕರಿಗದೊಂದು ಶಾಂತಿಯ ರಂಗಂ ॥

೨೧ ನೆಯ ನವಂಬರ್ ೧೯೨೩



" ನಿರುಕಿಪುದಾ ನಿರ್ಝರ ಪ್ರಪಾತಾದ್ಭುತಮಂ "

# ಜೋಗದ ಜಲಪಾತ

(ಕಂದ)

ಗಿರಿ ಕಾನನಂಗಳೊಳ್ ಮುನಿ ।
ವರರಂ ಪರವಶರ ಗೈದ ಬೆಡಗೆಂತಹುದೆಂ ॥
ದೊರೆವೊಡೆ ತೆರಳ್ದು ಜೋಗಕೆ ।
ನಿರುಕಿಪುದಾ ನಿರ್ಝರ ಪ್ರಪಾತಾದ್ಭುತಮಂ ॥

ಪರದೈವಕ್ಕರ್ಘ್ಯಮನಾ ।
ದರದಿಂದಂ ಪ್ರಕೃತಿಯೀವ ತೆರನಿದೊ ಮೇಣೀ ॥
ಧರಣಿಯ ಸಂತಾಪವ ಪರಿ ।
ಹರಿಸಲ್ ವನದೇವಿ ಗೈವ ಸೇವೆಯೊ ತಿಳಿಯೆಂ ॥

ಧೂರ್ಜಟಿ ಕಿರೀಟದಿಂದಾ ।
ಸ್ಫೂರ್ಜದ್ಗಂಗಾವರೋಹಮಾದ ಕ್ರಮಮಂ ॥
ಗರ್ಜಿತದಿಂ ಗಹನತೆಯಿಂ ।
ದೂರ್ಜಸ್ವತಿ ತೋರುತೀ ಶರಾವತಿಯಿಳಿವಳ್ ॥

ಒಂದೆಡೆ ವಕ್ರ ಶಿಲೋಚ್ಚಯ ।
ಮೊಂದೆಡೆ ವಿಸ್ತೃತ ಗಭೀರ ಭೀಕರ ಗರ್ತಂ ॥
ಸಂದಿರೆ ವಿಪಿನಾಂತರದೊಳ್ ।
ಮಂದ ಪ್ರಗತಿಯಿನುರುಳ್ವ ನದಿಯೇಂ ಸ್ಮಯಮೋ ॥



(ವೃತ್ತ)

ಕ್ಷೀರಾಸೇಚನ ಧಾರೆಯುಂತೆ ಸುರಿವಾ ನೀರ ಪ್ರವಾಹಂಗಳುಂ ।
ಸ್ಫಾರನ್ಮೌಕ್ತಿಕ ವೃಷ್ಟಿಯಂತೆ ಪೊಳೆವಾ ಬಿಂದು ಪ್ರವರ್ಷಂಗಳುಂ ॥
ಧಾರಾಭ್ರನ್ನಿಕರಂಬೊಲಾಡಿ ಸುಳಿವಾ ಫೇನ ಪ್ರತಾನಂಗಳುಂ ।
ತೋರುತ್ತಿತ್ತಪೂರ್ವದೊಂದು ಚಿತ್ರವ ಜನಕ್ಕಾ ಚೆಲ್ವನಾರ್ ಬಣ್ಣಿಪರ್ ॥

ಅತಿ ಲಾವಣ್ಯದಿ ಸಾರ್ವುದೇಂ ಬಗುಳಿ ನೀನೌದ್ಧತ್ಯದಿಂ ಪಾರ್ವುದೇಂ ।
ಲತೆಯುಂತಾಡಿ ವಿಲಾಸದಿಂ ಸರಿವುದೇಂ ಶೈಲಾಗ್ರದಿಂ ಬೀಳ್ವುದೇಂ ॥
ಕ್ಷಿತಿಯಿಂದೇಳುತೆ ನಾಟ್ಯದಿಂ ನಲಿವುದೇಂ ಪಾತಾಳಮುಂ ಸೇರ್ವವೋಲ್ ।
ಭೀತಿಗೊಂಡೋಡುವುದೇಂ ಶರಾವತಿಯಿದೇಂ ನಿನ್ನಿಷ್ಟಮಂ ಕಾಣ್ಬರಾರ್ ॥

ಶಮನಮಂ ಸೂಸುವ ಮಂತ್ರಂ ।
ರಮಣೀಯಮಾಕೃತಿಯನಾಂತು ಬಳುಕುವ ಮೀನಾ ಸಂ ॥
ಭ್ರಮಿಸುತೆ ಘೋರಾವಟದೊಳ್ ।
ಗಮಿಸುವ ನಿನ್ನಯ ವಿಲೋಲ ಭಾವಮಿದೇನೌ ॥


ದಿವಸೇಶ್ವರಂಗೆ ನಲವಿಂ ।
ನವರತ್ನಚ್ಛವಿಯ ತೋರಿ ದರ್ಶದ * ನಿಶೆಯೊಳ್ ॥
ಧವಳಾಂಶುವಾಗಿ ತಾರಾ ॥
ಧವನಂ ನೀನರಸಿ ಮೊರೆವುದಚ್ಚರಿಯಲ್ತೇ ॥

ಇದು ಸೃಷ್ಟಿಯ ಪಾಸಮೊ ಮೇ ।
ಇದು ಧಾತ್ರಿಯ ಬಾಷ್ಪ ಸಲಿಲ ಧಾರೆಯೊ ನೋಳ್ಪ ॥
ಇದು ನಮನಮನಿನಿಸುತೆ ತೋ ।
ರ್ಪುದದೊಂದಗ್ಗದ ಸರೌದ್ರ ಸಂಮೋಹನಮಂ ॥

ಮೈಸೂರು ಬಂಗಲೆ, ಜೋಗ

* ಕಾರ್ತಿಕ ಬಹುಳ ಅಮಾವಾಸ್ಯೆ

೭ನೆಯ ಡಿಸೆಂಬರ್ ೧೯೨೩.



“ ಶ್ರೀ ಕೃಷ್ಣರಾಜ ವಿಮಲ ಯಶೋ ವೈಭವ ಮಿದು ”

# ಕೃಷ್ಣರಾಜ ಸಾಗರ

---


ಕ್ರೀಡಾವಸ್ತು ವಿನೋದ ಪೇಟಿಕೆಯೆನಿಸಿರ್ಪೀ ವಿಶ್ವಮುಂ ಕೊಂಡು ನೀ ।
ಮಾಡುತ್ತಗ್ಗದ ಜಾಣ್ಮೆಯಿಂದಲೊಲಿಸಲ್ ನಾಂ ಪಾರಿತೋಷಂಗಳಂ ॥
ನೀಡುತ್ತಿರ್ಪನೆನುತ್ತಲಾ ಪ್ರಕೃತಿ ಸಂಕೇತಂಗಳಿಂ ಪುತ್ರರಂ ।
ಬೇಡುತ್ತಿರ್ಪರ್ಕಳ್ ಕಾಡುತಿರ್ಪರ್ಕಳಪ್ಪಾ ತಂತ್ರಂಗಳೇಂ ಚೋದ್ಯಮೋ ॥

ಆ ವಿವಿಧ ವಸ್ತು ನಿಕರದೊಳ್ ।
ಭಾವಿಷ್ಟ ಮನಸ್ಕರಾಗಿ ತದ್ಯೋಜನೆಯೊಳ್ ॥
ಭಾವಿತ ಸುತಂತ್ರರಾದಾ ।
ಕೋವಿದರೀ ಭುವಿಗೆ ಮಾನ್ಯರವರೆ ವದಾನ್ಯರ್ ॥

ಶೀತಲ ಕಾವೇರೀ ಜಲ ।
ಪಾತದೆ ನಗರಗಳ ಬೆಳಗಿ ಕಜ್ಜಗಳೆಸಪಾ ॥
ಜ್ಯೋತಿಯ ನಿರ್ಮಿಸಿ ಭುವನ ।
ಖ್ಯಾತಿಯನೊಂದಿದನದೊರ್ವನತಿಶಯ ಚತುರಂ ॥

ಹರಿವಾ ಕಾವೇರಿಗೆ ನಾಂ ।
ಗಿರಿಯುಂಡದೊಳಡ್ಡವಿಟ್ಟು ಸರಸಿಯನಿತ್ತಲ್ ॥
ವಿರಚಿಸುವೆನೆಂದದೊರ್ವಂ ।
ಪರಮೋತ್ಸಾಹದಿ ನೆಗಳ್ಚಿ ಮುಂದಡಿಯಿಟ್ಟಂ ॥

ಅವರಿಂದಾದುದು ನಯನೋ ।
ತ್ಸವವಿದು ಶ್ರೀಕೃಷ್ಣರಾಜ ವಿಮಲಯಶೋ ವೈ ॥
ಭವವಿದು ಜನಪದ ಸುಕೃತೋ ।
ದ್ಭವವಿದು ಮೇಣ್ ಪುರುಷಕಾರ ಮಹಿಮಾನುಭವಂ ॥



"ಆರಾಜಿಪುದಿ ಪ್ರದೀಪ್ತ ಪುರ ದಿಗ್ಭಾಗಂ"

# ಚಾಮುಂಡಿಯ ದೀಪಗಳು

## ದೀಪಾವಳಿಯ ರಾತ್ರಿ—ಲಲಿತಾದ್ರಿಗೆ ಮೋಟಾರು ಗಾಡಿಯಲ್ಲಿ ಹೋಗುವಾಗ

---


ಜ್ಯೋತಿಸ್ಸಮುದ್ರಮಿತ್ತಲಾ ।
ಭೂತಲದಾಂಧ್ಯದ ನಿವಾಸಮಿತ್ತಲಾ ನೋಡಿ ॥
ಕೌತುಕದ ಗಿರಿಪಥಂ ಮುನು ।
ಜಾತರ ಜೀವನದ ಚಿತ್ರಗತಿಯುಂ ಪೋಲ್ಗುಂ ॥

ಪುರದೀಪ ಪ್ರಭೆಯು ಪೂರಾ ।
ಗಿರಿಕಂದರದಮಿತ ಗಾಢ ತಿಮಿರೋತ್ಕರಮುಮಂ ॥
ಬೆರಗಾಗಿಪುದು ಮನಕ್ಕೆ ।
ಪರಿಶೋಧಿಗಮಿತ್ರ ಸೃಷ್ಟಿವಿಭವಮದೆಂತುಂ ॥

ಗೌರಿಯ ನಿವಾಸ ಶೈಲಮು ।
ನಾರಾಧಿಸಮೇಳ್ಕುಮೆಂದು ಗಗನತಲಂ ತಾಂ ॥
ತಾರಾಸಹಿತಂ ಬಂದಪ್ಪೊ ।
ರಾರಾಜಿಪುದೀ ಪ್ರದೀಪ್ತ ಪುರ ದಿಗ್ಭಾಗಂ ॥

ನೀಲಾಂಬೋಧಿಯ ತೆರೆಗಳೊ ।
ಲೋಲಾಡುವ ದೀಪ್ತ ದೇವಯಾನೋತ್ಸವಮಂ ॥
ಪೋಲುತ್ತಿರ್ಪುವು ವಿದ್ಯು ।
ಜ್ಜ್ವಾಲೆಗಳೀ ಗಿರಿಯ ತಳದ ಚಿತ್ರಾಕೃತಿಯಂ ॥

ಮೂಲಪ್ರಕೃತಿಯಿನೊಗೆದೀ ।
ಜ್ವಾಲಾವಳಿ ಸಲ್ಗುಮಾಕೆಗೆನ್ನುತಲೀ ಭೂ ॥
ಪಾಲಂ ಘನ ವಿದ್ಯುಸ್ಸ್ರಣೀ ।
ಮಾಲೆಯಿನೀ ಶೈಲವರಕಲಂಕೃತಿಗೆಯ್ದುಂ ॥



“ ಆ ಜಲ ವಿಲಾಸಮೇನತಿಶಯವೋ ”

# ಶಿವನ ಸಮುದ್ರ


(ಕಂದ)

ತರುಗುಲ್ಮಾವೃತ ಶೈಲಮು |
ಮರಕತ ಶಿವಲಿಂಗಮೆನುತೆ ಕಾವೇರಿಯುದಂ ||
ಪುಲಕರಿಸಿ ಲೋಕಕೆಲ್ಲಂ |
ದೊರೆಯಿಸುವ ತೀರ್ಥಾರಂಭಮಲ್ತೆ ಶಿವನ ಸಮುದ್ರಂ ||

ಒಂದೆಡೆಯೊಳಾದಿಶಕ್ತಿಯು |
ಸಂಧಾನಾದ್ಭುತ ವಿಶೇಷಮಾರ್ಘಟಿಸಲ್ ಮೇ ||
ಣೊಂದೆಡೆ ಮೆರೆವುದು ಮನುಜನ |
ಸಂಧಾನಾದ್ಭುತ ವಿಶೇಷಮಾ ಮಂಡಲದೊಳ್ ||

ಮೊರೆಯುತೆ ಸರಿಯುತೆ ಭರದಿಂ |
ಹರಿದೋಡುತೆ ಜಾರಿ ಹಾರಿ ಮುಕ್ತಾಂಜಲಿಯಂ ||
ಎರಚುತಲೆರಗುತೆ ರಭಸದಿ |
ಬರುತಿರ್ಪ ಜಲವಿಲಾಸಮೇನತಿಶಯಮೋ ||

ಶಿವನೊಡಲ ಹಾರಮೇಂ ನಿಜ |
ಭವನಕೆ ಸರಿಮಾಡಿಕೇಷ ಸಂತತಿಯೇನಾ ||
ಧವಳತರ ಧಾರೆ ಮಾಡಿಪು |
ದವಲೋಕನಕೊಂಡು ಭೀಷ್ಮ ಸಂಮೋಹನಮಂ ||




ಉರಗಿಯಂತೆಯುರುಗಿ ತಿರುಗಿ ಥಳಥ ಥರದಿ ಸರಿದು ಮುಸಗಿ।
ಬೆಟ್ಟದಿಂದಲುರುಳಿ ಹೊರಳಿ ಬಟ್ಟತನದಿ ತೊಳಗಿ ವೊಳಗಿ॥
ಘೋರ ವೇಗದಿಂದ ನೆಗೆದು ಘೋರಸುತ್ತ ಮುಂಜನೆಸೆದು।
ಹನಿಯು ಮುಗಿಲ ಕವಿಸಿ ಸರಿದು ಮನುಜ ಸೇವೆಯಿಂದ ಲೊಲಿದು॥

ಬಲವ ಬೆಳಕ ನೀಡುತುಂ ನಿಲದೆ ನಾಟ್ಯವಾಡುತುಂ।
ಸುಗ್ಗ ಪೇಳುತೇಳುತುಂ ನೆಗೆದು ಹಾರುತೋಡುತುಂ॥
ಭುವನ ರಜನೆಯುನಿತು ಕುತುಕವೀಯುತ ಜನಕೆ ಸಾರುತುಂ।
ಭುವನ ಜನನಿಯುನಿತು ಹತುರಳಿಸುತ ಕಣ್ಗೆ ತೋರುತುಂ॥
ಪುರುಷ ಬಲವ ಬೆಳಗಿರೆಸುತ ಜಡರ ಹಳಿದು ನೊಳಗುತುಂ।
ಹರಿವಳೀ ಕವೀರ ತನಯೆ ಧೀರ ಜನನಿಯೆನಿಸುತುಂ॥

(ಕಂದ)

ಕನ್ನಡ ನಾಡಿನ ಕುತುಕಂ।
ಕನ್ನಡಿಗರ ಸಾಹಸಕ್ಕೆ ಕನ್ನಡಿ ಮೇಣೀ॥
ಕನ್ನಡಿಗರ ಭಾಗ್ಯದ ನಿಧಿ।
ಯುನ್ನತಿಯುಂ ಪಡೆದು ಬಾಳ್ಗೆ ಶಿವನ ಸಮುದ್ರಂ॥

ರುಧಿರೋದ್ಗಾರಿ ಸಂ॥ ಆಶ್ವಯುಜ ಶು॥ ೧೦
೧೯ನೆಯ ಅಕ್ಟೋಬರ್ ೧೯೨೩



“ ಭೂರಿಸ್ನಾಯುವನದೇಕೆ ಧರೆಯುಣ್ಮೆ ಸುಗುಂ ”

ಉರಮಂ ಶಿರಮಂ ಚುಂಬಿಸಿ ।
ಸರಸತೆಯಿಂ ಸುಳಿಯುತಿರುವ ಗೌರಾಂಗ ಮನೋ ॥
ಹರೆ ಕಾದಂಬಿನಿಯು ತಿರ ।
ಸ್ಫುರಿಸೀ ಶೈಲಾಧಿರಾಜನೀಂ ನೀರಸನೋ ॥

ಶೃಂಗಶತಂ ಮರಕತಮಯು ।
ಸಿಂಗರಗಳ ತೊಟ್ಟು ಪೊಳೆವ ಸಾಮಂತರವೊಲ್ ॥
ಕಂಗೊಳಿಪುದದೆತ್ತಲುಮತಿ ।
ತುಂಗಾಕೃತಿಯಾಗಿ ನೋಡುಮೀತನ ಸಭೆಯೊಳ್ ॥

ಆರೋ ಮಲ್ಲರ್ ಪಲಬರ್ ।
ಮೀರವ್ಯಾಯಾಮಕಾಂಗ ವಿನ್ಯಾಸಗಳಿಂ ॥
ಪೋರಿದರಿತ್ತಲದಿಲ್ಲದೆ ।
ಭೂರಿ ಸ್ನಾಯುವನದೇಕೆ ಧರಿಯುಣ್ಮಿಸುಗುಂ ॥

ಭೈರವ ತಾಂಡವ ಭುವಿಯೋಂ ।
ಮಾರುತಿ ಲೀಲಾಪ್ರದೇಶಮೋಂ ಭೀಮ ಗದಾ ॥
ಘೋರರಣಿಯಂಗಣಮೀಸೀ ।
ಧಾರಿಣಿಯೇಕಲ್ಲದಿಂತು ದುಮುರ್ಜಿಯುಷ್ಟುಕ್ ॥



" ಹರಿಚರಣಂ ನಿನ್ನಿಂ ಬಲಿ ಪಿರಿದೆನಿಪವೊಲಾದುದು "

# ಬಲಿ ಚಕ್ರವರ್ತಿ


ಬಲಿ ಚಕ್ರವರ್ತಿ ಭೂಸ್ವ ।
ರ್ವಲಯುಗಳಂ ಭುಜದ ಬಲದೆ ನೀಂ ಗೆಲ್ದೊಡದೇ ॥
ನೊಲಿದಾ ವಟುವಿಂಗೆಲ್ಲವ ।
ಬಲಿಗೈಯುತ್ತೆ ತೋರ್ದೆ ಬಲಮಂ ಬಲುಮೆಯನಿಕ್ಕುಂ ॥

ಛಲದಿಂ ಮೂರಡಿಯುಂ ಪಿರಿಯಂ ಜಯಿಸಿದಂ ದೈತ್ಯಾರಿಯೆಂದೆಂಬುದೇಂ ।
ಬಲಿ ನಿನ್ನಂದದಿ ಭೂಪಿಸಂಗಳೊಳದಾರುಂ ತ್ಯಾಗಿಯಿಲ್ಲೆಂದೆನು ॥
ತ್ರೈಲೋಕ್ಯಾಗ್ರಪುಲಕ್ಷ್ಯನಾದ ಚರಣಶ್ರೀ ರಾಶಿಯುಂ ನಿನ್ನಯಾ ।
ತಲೆಯೊಳ್ ಸಾರಿಸಿದನಾ ತ್ರಿವಿಕ್ರಮನಲ್ತೈ ನಿನ್ನಂತದಾರಾ ಧನ್ಯರೋ ॥

ಹರಿ ಚರಣಂ ನಿನ್ನಿಂ ಬಲಿ ।
ಪಿರಿದೆನಿಸನ್ನೊಲಾದುದೊಂದು ಸೋಜಿಗಮಲ್ಲಂ ॥
ಗುರುತೆಯುಮರಿತೊಡೆಯುಂ ನೀಂ ।
ಶಿರದೊಳದಂ ತಾಳ್ದುದಲ್ತೆ ಲೋಕದ ಚಿತ್ರಂ ॥

ಮೀನಾದಂ ಕೂರ್ಮನಾದಂ ದನುಜರಸಿರಿಯುಳ್ ಪಂದಿಯಾದಂ ರಮೇಶಂ ।
ಮೇಣಾ ಸಿಂಹಾಸ್ಯನಾದಂ ಮುಗುಳ್ ಜನಿಸಿದಂ ಶೂರರಂ ತಾದೊಡಂ ತಾಂ ।
ದೀನಾಲ್ಪಾಕಾರದಿಂ ಬಂದತಿಶಯ ನಯದಿಂ ಬೇಡಿದಂ ವಿಷ್ಣು ನಿನ್ನಂ ।
ದಾನೋದ್ದಾಮಾಗ್ರಣೀ ನೀಂ ಹರಿಯ ಕಿರಿಯನಂ ಗೈದೆಯಲ್ತೈ ಬಲೀಂದ್ರಾ ॥

ಶ್ರದ್ಧೆಯುನಾರ್ಜನ ವಿಧಿಯೊಳ್ ।
ಸಿದ್ಧತೆಯುಂ ದಾನದೀಕ್ಷೆಯೊಳ್ ಪ್ರಕಟಿಸುವಾ ॥
ಶುದ್ಧಾತ್ಮತೆಯುಂ ಭುವನದೊ ।
ಳುದ್ದೀಪಿಪ ದೀಪಮಲ್ತೆ ಬಲಿ ನಿನ್ನ ಯಶಂ ॥



# ಬೇಲೂರಿನ ಶಿಲಾ ಬಾಲಿಕೆಯರು

(ಕಂದ)

ಶ್ರವಣಕೆ ನಿಲುಕದ ಲಲಿತಾ ।
ರವ ಸುಖಮಂ ರಸನೆಗೊದವದಮೃತ ದ್ರವಮಂ ॥
ಎವೆಯಿಕ್ಕದ ನಯನಗಳಿಂ ।
ನಮಿಪುದು ನೀವೆಂಬ ಮಾಯಗಾತಿಯರಿವರಾರ್ ॥

(ಸೀಸ)

ಶೃಂಗಾರ ವಲ್ಲರಿಯು ಲತೆಯೊಡನೆ ಬಳುಕಿ ನೀಂ
ನೃತ್ಯ ಲಾಸ್ಯದಿನಾರಸೊಲಿಸುತಿರುವೆ ।
ಮಾಧುರ್ಯ ಮಂಜೂಷೆ ಮಧುರತರ ಮೌನದಿಂ
ದಾರ ಚರಿತೆಗಳ ಶುಕಿಗುಸಿರುತಿರುವೆ ।
ಮುಗ್ಧ ಮೋಹನ ವದನೆ ಮುಕುರದೊಳ್ ನೋಡಿ ನೀ
ನಾರ ನೆನೆದಿಂತು ನಸುನಗುತಲಿರುವೆ ।
ಪ್ರಣಯ ಪ್ರರೋಹೆ ನೀಂ ಪ್ರಿಯತರಾಕೃತಿಯಿಂದೆ
ರುಷೆಯನಿಂತಾರೊಳಭಿನಯಿಸುತಿರುವೆ ॥

ಶಿಲ್ಪಿ ವರ ಕುವರಿಯರೆ ಸೌಂದರ್ಯ ಮುದ್ರಿಕೆಯರೆ ।
ದೇವದೇವನ ಸೇವೆಗೈತರ್ಪ ಸಾಧು ಕುಲಮಂ ।
ಭಾವ ವಿನ್ಯಾಸ ವೈಕೃತಿಗಳಿಂ ಬೆರಗುವಡಿಸಿ ।
ಚಂಚಲತೆಗೆಡೆಯೆನಿಸಿ ನೀವಿಂತು ನಿಲುವುದೇಕೆ ॥



“ಮಧುರತರ ಮೌನದಿಂದಾರ ಚರಿತೆಗಳ
ಶುಕಿಗುಸುರುತಿರುವೆ”



“ಮುಕುರದೊಳ್ ನೋಡಿ ನೀನಾರ ನೆನೆದಿಂತು
ನಸುನಗುತಲಿರುವೆ”

ಇನ್ನೆವರವೊಲಿದು ಬಾರದ ನಿಮ್ಮ ಮನದಿನಿಯು
ನಿನ್ನ ಬಹುನೆಂದು ನೀಂ ತಿಳಿವುದೆಂತು ।
ಅಗಣಿತ ಪ್ರೇಕ್ಷಕರೊಳಿರಬಹಾ ಸುಕೃತಿಯಾ
ವಿಷಮ ಸಮಯದಿ ನಿಮಗೆ ದೊರೆವುದೆಂತು ।
ನಿಮ್ಮ ವದನದ್ಯುತಿಗೆ ಮರುಳಾಗಿ ಬಾರದನ
ರೂಪ ರೇಖೆಗಳಿಂದಲೊಲಿವುದೆಂತು ।
ನಿಮ್ಮ ನೂಪುರ ರವಕೆ ಬೆರಗಾಗಿ ನಿಲ್ಲದನ
ರಸಿಕಮಣಿಯೆನ್ನುತಾದರಿಪುದೆಂತು ॥

ರೂಪವಿಲ್ಲದನೇನೊ ನಿಮ್ಮನಿಯನಲ್ಲದಿರೆ ತಾಂ ।
ರೂಪ ವಿಭವದಿನಿತ್ತಲೈತಂದು ಮೆರೆಯೆ ನಿಮ್ಮ ।
ಲಾಸ ಲಾವಣ್ಯಗಳ್ ಧರೆಯಿಂದೆ ಪಾರ್ವನುತೆ ।
ಮರೆಯೊಳಡಗಿರುತೆ ನಿಮ್ಮಂದದಿಂ ನಲಿವನೇನೋ ॥

ಶ್ರುತ ಗಾನಮಧುರಾಮೃತವಾದೊಡಶ್ರುತಗಾನ
ಮಧುರಾಮೃತತರಮೆನುತೆ ರಸಿಕರೊರೆವರ್ ।
ರಾಮಣೀಯಕ ಕುಲಮ ನಿಮ್ಮೆದೆಯ ನುಡಿ ಕಿವಿಯ
ನಾನದೊಡಮೆಮ್ಮೆದೆಯ ಸೇರಲರಿಗುಂ ।
ಅದರಿಂದಮಲ್ತೆ ನಿಮ್ಮಭಿಮತಂಗಳನರಿತು
ಜಾಣರೆನಿಬರೊ ನಿಮ್ಮ ಪೊಗಳಿ ನಲಿವರ್ ।
ವರ್ಷಶತಕಗಳಿಂದೆ ಕುಂದದಿಹ ಲಾವಣ್ಯ
ದಂತರಂಗವನಿಂತು ಬಗೆವೆನೀಗಳ್ ॥

ಪದಿಯ ಕರ ಚಾತುರಿಯೊಳನಿತಿನಿತು ಸುಳಿದು ಸರಿವ ।
ಮನುಜ ಮಾನಸದೊಳತಿ ಚಿತ್ರದಿಂ ಚಲಿಸಿ ಮೆರೆವ ।
ಭುವನ ಜೀವನ ಸಸ್ಯಕಮೃತ ಬಿಂದುಗಳನೆರೆವ ।
ಪರತತ್ತ್ವ ಮಾಧುರಿಯನಿನಿಸು ನೀಂ ತೋರ್ಪಿರಲ್ತೆ ॥



“ಪ್ರಿಯತರಾಕೃತಿಯಿಂದೆ ದುಷ್ಯಂತನೊಳಭಿನಯಿಸುತಿರುವ”

ಆನಂದ ನಿಧಿಯನಾಪರಾತ್ಪರನೆನಿಸಲಾ ಜಗದೊ
ಳಾನಂದವೀವರಂ ಕಳೆಯಲಹುದೇಂ ।
ಪ್ರೇಮಮಯ ಮೂರ್ತಿಯನಾ ಪರದೇವನೆನುತಿರಲಾ
ಪ್ರೇಮಾಂಕುರಂಗಳಂ ಮುರಿಯಲಹುದೇಂ ।
ಸೌಂದರ್ಯ ಸರ್ವಸ್ವ ನಿಧಿಯನಾತನೆನುತಿರಲಾ
ಸುಂದರಾಕಾರರೊಳ್ ಮುಳಿಯಲಹುದೇಂ ।
ಜೀವನಾಧಾರನವನೆನುತೆ ಪೊಗಳುತ್ತಿರಲಾ
ಜೀವನೋಜ್ಜ್ವಲೆಯರಂ ಪಳಿಯಲಹುದೇಂ ॥

ಜಗದುದಯಕಾರಣನ ನೃತ್ಯಮಂಗಳನರಿತು ನೆನೆದು ।
ಜಗದ ಯಾತ್ರೆಯ ನಡೆವ ಜನಕೆ ನಿಮ್ಮಂದದಿಂದಂ ।
ನೊಗವನಿನಿಸು ತೋರಿ ಸಂಸ್ಕೃತಿ ಪಥಂ ಸುಗಮಮೆನಿಸಲ್ ।
ಅದುವೆ ದೇವಂಗೆ ನೀಮೆಸಗುವಾ ಸೇವೆಯಲ್ತೆ ॥

ವಿಶ್ವ ತಂತ್ರ ರಹಸ್ಯ ಬೋಧನೋತ್ಸಾಹಮಿದು
ವಿಶ್ವ ಶಿಲ್ಪಿಯ ಸಭೆಯೊಳುಚಿತಮೆನಿಕುಂ ।
ವಿಗತ ಸೌಮನಸರುಂ ವಿಪರೀತ ಚರಿತರುಂ
ವಿಮುಖತೆಯನಾನಲದರಿಂದೆ ನಿಮಗೇಂ ।
ಮೊಳಗುಗೆಲೆ ಸರಳೆಯರೆ ನಿಮ್ಮ ನೃತ್ಯದ ಪದವನನು
ಕರಿಸ ವಾದಿತ್ರಗಳ್ ಸೂಕ್ಷ್ಮಟಿಂದೆ ।
ನೆಳಲನಿತ್ತೀ ಲತಾವಳಿ ನಿಮ್ಮನಾದರಿಕ
ದೆಂದಿಗುಂ ತಂಬೆಲರ ಸುರಭಿಯಿಂದೆ ॥

ನಗುತ ನಲಿಯುತ ಮೆರೆದು ಹಾವ ಭಾವಗಳೆಸೆದು ।
ಮಂಜು ಜಲ್ಪವ ತೋರಿ ಮುಗ್ಧ ವೀಕ್ಷಣವ ಬೀರಿ ।
ಕಠಿನರಾಗದೆ ಕಾಲ ದೌಷ್ಟ್ಯದಿಂ ಕುಂದುವಡದೆ ।
ಶುಷ್ಕ ಹೃದಯರ್ಗೆ ನೀಂ ಸೌಹೃದವ ನೀಡುತಿಹುದೌ ॥




" ಬೆಳೆಯಿರಾ ಪ್ರೇಮ ಧರ್ಮೋದ್ಧರಣ ವಿಧಿಯೊಳೆಂದುಂ "

ಅವ್ಯಕ್ತ ನಿನದದಿಂದಕಲಂಕಿತಾಂಗದಿಂ
ದನ್ಯೂನ ತರುಣತೆಯಿನಮಿತ ಯಶದಿಂ ।
ಚಿರ ಕಾಲಮೆಸೆವುದೌ ಚಿತ್ತವೇಧನಿಯುರಿರ
ಕುದಿವ ಲೋಕಕೆ ಮುದದ ತಣಿಪ ಬೇರಿ ।
ಸೌಂದರ್ಯವೋ ವಿಶ್ವತತ್ತ್ವಮಾ ಪರತತ್ತ್ವ
ಭಾಸವೋ ಸೌಂದರ್ಯಮೆನುತ ಸಾರಿ ।
ನಿಮಗೆ ಜನ್ಮವನಿತ್ತ ಚಿತ್ರ ಚತುರರ ಚಿತ್ತ
ದೇಕಾಗ್ರ ಭಕ್ತಿ ದೀಪಿಕೆಯು ಬೆಳಗಿ ॥

ಪೊಳೆಯಿರೌ ಸರಸ ಜೀವನ ಮಂತ್ರ ಗುರುಗಳೆನಿಸಿ ॥
ಪಳಿಯಿರೌ ಮಧುರ ಭಾಷವ ಪಳಿವ ವಿಕೃತ ಮತಿಯುಂ ।
ಕಳೆಯಿರೌ ರಸ ಕಲಾ ವಿಮುಖತೆಯ ಜನದ ಮನದಿಂ ।
ಬೆಳೆಯಿರೌ ಪ್ರೇಮ ಧರ್ಮೋದ್ಧರಣ ವಿಧಿಯೊಳೆಂದುಂ ॥

೧೦ ನೆಯ ಡಿಸೆಂಬರ್ ೧೯೨೩



“ ಪರಮೋತ್ತುಂಗತೆಯಿಂದೆ ನೀನರಿಯಿಪಯ್ ಶ್ರೀ ಗೋಮಟಾಧೀಶ್ವರಾ ”

# ಗೋಮಟೇಶ್ವರ

---


(ವೃತ್ತ)

ಸರನಾಗಿರ್ದೊಡದೇಂ ಸರಾಧಿಪತಿಯುಂ ತಾನಾದೊಡೇನೀ ವಸುಂ ।
ಧರೆಯೊಳ್ ತೃಷ್ಣೆಯ ಪಾಶಮಂ ಪರಿದು ಕರ್ಮಾವರ್ತಮಂ ದಾಂಟಿ ಜೀ॥
ವರಿಗೆಲ್ಲಂ ಶಮ ದೀಕ್ಷೆಯಂ ಕರುಣಿಪಾ ನಿನ್ನಂದದೌನ್ನತ್ಯದಿಂ ।
ಮೆರೆವಾ ಸಂಯಮಿಯೊರ್ವನೇ ಕೃತಿಯಲ್ತೆ ಶ್ರೀಗೋಮಟಾಧೀಶ್ವರಾ ॥

ಜಗದೊಳ್ ಜೀವಿಸವೇಳ್ಕುಮೆಂಬುದುಚಿತಂ ಜೀವಿಪ್ಪ ಸಂರಂಭದೊಳ್ ।
ಸೊಗಮಂ ಸಾಧಿಸವೇಳ್ಕುಮೆಂಬುದುಚಿತಂ ತತ್ಸಾಧನೋದ್ಯೋಗ
ದೊಳ್॥
ಪಗೆಯಂ ಗೆಲ್ಲಲಿವೇಳ್ಕುಮೆಂಬುದುಚಿತಂ ನ್ಯಾಯಂಗಳಿಂತಿರ್ದೊಡಂ ।
ಬಗೆಯಲ್ ವಾಂಛೆಯಗೆಲ್ವುದೇ ಸುಖಮಲ್ತೆ ಶ್ರೀಗೋಮಟಾಧೀಶ್ವರಾ॥

ಭೋಗಾಪೇಕ್ಷೆಯ ನೀಗಿಯುಂ ಮುದಿತ ದೀಪ್ತ ಸ್ವಾಂತನಾಗಿರ್ದು
ಮೇಣ್ ।
ರಾಗ ದ್ವೇಷ ಗಣಂಗಳಂ ತೊರೆದೊಡಂ ತಾಳಿರ್ದು ಸಸ್ಕೃತ್ರಿಯುಂ ॥
ತ್ಯಾಗಾವಸ್ಥಿತನಾದೊಡಂ ಜನತೆಯಂ ನಿನ್ನಂತೆ ಸಂತೈಸುವಾ ।
ಯೋಗಿಶ್ರೇಷ್ಠನೆ ಧನ್ಯನಲ್ತೆ ಭುವಿಯೊಳ್ ಶ್ರೀಗೋಮಟಾಧೀಶ್ವರಾ ॥

ತನುಭೃತ್ಕೋಟಿಯನಾಳುವಾ ಪ್ರಕೃತಿಯೀ ವಿಶ್ವಂಭರಾ ಚಕ್ರದೊಳ್ ।
ಮನುಜಂಗಗ್ರತೆಯಿತ್ತಳೆಂಬ ನುಡಿಯಂತಿರ್ಕಾ ಮಹಾಮಾಯೆ ತಾಂ ॥
ತನಯಂಗೊಡ್ಡುವ ಮೋಹಜಾಲವನದಾರ್ ಭೇದಿಪ್ಪರಾತಂತ್ರದಿಂ ।
ಜನಿಪ ಸ್ಪರ್ಧೆಯ ನೀಸಲ್ಕೆ ಗೆಲಿದವಂ ಶ್ರೀಗೋಮಟಾಧೀಶ್ವರಾ ॥



" ಅತ್ಯೌನ್ನತ್ಯವತೋರಿ ನಿನ್ನಿರವಿನೊಳ್ ಶ್ರೀ ಗೋಮಟಾಧೀಶ್ವರಾ "

ಸುತರಂ ತೋಷಿಸಲಾಟವಾಡುತವರಂ ಕಾಡುತ್ತವರ್ ಗೋಳಿಡಲ್ ।
ಸ್ಮಿತದಿಂ ನೋಡುವ ತಾಯನೊರ್ವ ತನುಜಂ ತಾಂ ಜಾಣ್ಮೆಯಿಂ
ಸೋಲಿಸಲ್ ॥
ಅತಿ ಸಂತುಷ್ಟಿಯನಾಂಪಳಾಕೆಯುದರಿಂ ನೀನಂತು ಮಾಯಾತಿರ ।
ಸ್ಕೃತಿಯಿಂ ವಿಶ್ವವಿಧಾತ್ರಿಯಂ ತಣಿಸಿದೈ ಶ್ರೀಗೋಮಟಾಧೀಶ್ವರಾ ॥

ಕಲಿಯೀತಂ ಕಲಿತಿರ್ದೊಡಂ ಕಲೆಗಳಂ ಮೌನವ್ರತಖ್ಯಾತ ದೋ ।
ರ್ಬಲಿಯೀತಂ ಬಲಮುಳ್ಳೊಡಂ ಪ್ರಥಿತ ಸೌಮ್ಯಾಕಾರನೀತಂ ಮಹೋ ॥
ಜ್ಜ್ವಲರೂಪೋನ್ನತನೀತನೀ ಸೊಬಗನಾಂತಿರ್ದುಂ ತೃಷಾತೀತನೆಂ ।
ದುಲಿಯುತ್ತಿರ್ಪವು ನಿನ್ನನೀ ಭುವನಗಳ್ ಶ್ರೀಗೋಮಟಾಧೀಶ್ವರಾ ॥

ಧರೆಯೊಳ್ ಪುಟ್ಟಿದೊಡಂ ಧರಾಧರವರಂ ಮೇಲೆಳ್ದು ಕಾರ್ಮೋಡಮಾ ।
ವರಿಸುತ್ತೆಚ್ಚಾಡಮುರ್ದೆಯೊಳ್ ನಿಲದೆ ಮೇಲೇಳುತ್ತೆ ಸೂರ್ಯಾ
ಪ್ತಿಯಿಂ ॥
ಮೆರೆವಂತುನ್ನತಿಗೆಳ್ದು ನಿನ್ನ ತೆರಸಂ ಪೌರುಷ್ಯ ಪಾರಮ್ಯಮುಂ ।
ಪರಮೋತ್ತುಂಗತೆಯಿಂದೆ ನೀನರಿಯಿಪಯ್ ಶ್ರೀಗೋಮಟಾಧೀಶ್ವರಾ ॥

ಅತ್ಯುಚ್ಚಂಡ ಪರಾಕ್ರಮ ಪ್ರಥಿತನಾ ಚಾವುಂಡರಾಯಂ ಮಹತ್ ।
ಕೃತ್ಯಾದರ್ಶನುಮಾದನಲ್ತೆ ಮಹಿಯೊಳ್ ನಿನ್ನಾಖ್ಯೆಯಂ ಬಿತ್ತೆ ಸಂ ॥
ಸ್ತುತ್ಯಂ ಮಾನವಮಾನದಂ ಪ್ರಕೃತಿಯಿಂದುಚ್ಚಾಶಯಂ ನೀನೆನಿ ।
ಪ್ಪತ್ಯೌನ್ನತ್ಯವ ತೋರಿ ನಿನ್ನಿರವಿನೊಳ್ ಶ್ರೀಗೋಮಟಾಧೀಶ್ವರಾ ॥

೧೧ ನೆಯ ಡಿಸೆಂಬರ್ ೧೯೨೩

# ಗೀತಗಳು

## ನಿನ್ನ ವಿಲಾಸ

(ಮೋಹನ ರಾಗ—ಆದಿತಾಳ)

ನಿನ್ನ ವಿಲಾಸವನರಿವರದಾರೋ ।
ನಿಖಿಲಾದಿಮೂಲಾ ॥ ಪಲ್ಲವಿ ॥

ದಯೆಯ ಬೀರುವಾ ದೊರೆ ।
ಭಯವ ತೋರುವಾ ಅರಿ ।
ನಯವ ಸಾರುವಾ ಗುರು ।
ನೀನಲ್ಲದಾರೋ ॥ ಅನುಪಲ್ಲವಿ ॥

ಒಲಿದು ಬೊಂಬೆಯನೆತ್ತಿ ।
ಮುದ್ದಿಸಿ ಬಳಿಕದ ।
ಮುಳಿದು ಬಿಸುಡುವಾ ಶಿಶು ।
ಲೀಲೆಯ ಪೋಲುವ ॥ ೧ ॥

ನಾಟ್ಯರಂಗಕೆ ಬಂದು ।
ವಿವಿಧ ವೇಷದಿ ನಿಂದು ।
ಅಳಿಸುವಾ ನಗಿಸುವಾ ।
ನಟನ ರೀತಿಯ ಪೋಲ್ವ ॥ ೨ ॥

# ವನ ಸುಮ

(ಅಠಾಣ ರಾಗ—ರೂಪಕ ತಾಳ)

ವನಸುಮದೊಲೆನ್ನ ಜೀ।
ವನವು ವಿಕಸಿಸುವಂತೆ।
ಮನವನನುಗೊಳಿಸು ಗುರುವೇ—ಹೇ ದೇವ ॥ ಪ ॥

ಜನಕೆ ಸಂತಸವೀವ।
ಘನನು ನಾನೆಂದೆಂಬ।
ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ ಬಿಡದೆ ॥ ಅ—ಪ ॥

ಕಾನನದಿ ಮಲ್ಲಿಗೆಯು।
ಮೌನದಿಂ ಬಿರಿದು ನಿಜ।
ಸೌರಭವ ಸೂಸಿ ನಲವಿಂ।
ತಾನೆಲೆಯ ಪಿಂತಿರ್ದು।
ದೀನತೆಯ ತೋರಿ ಅಭಿ।
ಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ ॥ ೧ ॥

ಉಪಕಾರಿ ನಾನು ಎ।
ನ್ನುಪಕೃತಿಯು ಜಗಕೆಂಬ।
ವಿಪರೀತ ಮತಿಯನುಳಿದು ॥
ವಿಪುಲಾಶ್ರಯವನೀವ।
ಸುಫಲ ಸುಮ-ಭರಿತ ಪಾ।
ದಪದಂತೆ ನೈಜವಾದೊಳ್ಪಿನಿಂ ಬಾಳ್ವವೊಲು ॥ ೨ ॥

# ಎನ್ನದು ಯಾವುದು

(ಕಲ್ಯಾಣೀ ರಾಗ—ರೂಪಕ ತಾಳ)

ಎನ್ನದು ಯಾವುದಯ್ಯಾ—ಎನ್ನಯ ದೊರೆ
ಅನ್ಯರದಾವುದಯ್ಯಾ ॥ ಪ ॥

ಎಲ್ಲಾ ಸೌಭಾಗ್ಯವು ನಿನ್ನದಾಗಿರಲಾಗಿ ॥ ಅ-ಪ ॥

ಗಂಗೆಯ ಜಲವೆಲ್ಲಿ ತುಂಗಭದ್ರೆಯದೆಲ್ಲಿ ।
ಮಂಗಳಕರಳಹ ಯಮುನೆಯದೆಲ್ಲಿ ॥
ತುಂಗತರಂಗೆಯ ಸಿಂಧೂನದಿಯದೆಲ್ಲಿ ।
ಏಂಗಡಿಸುವರಾರು ಜಲನಿಧಿಯೊಳು ಪೊಕ್ಕು ॥ ೧ ॥

ಚಂಪಕ ರಜವೆಲ್ಲಿ ಚಂದನ ರಜವೆಲ್ಲಿ ।
ಸೊಂಪಿನ ಪಾಟಲ ರಜವು ಅದೆಲ್ಲಿ ॥
ಪಾರಿಜಾತದ ರಜವೆಲ್ಲಿ ಎಂಬುದನಾರು ।
ಪರಿಕಿಸಿ ಪೇಳ್ವರು ವನ ವಾತದೊಳು ನಿಂದು ॥ ೨ ॥

ಭಿನ್ನಭಾವವ ಬಿಟ್ಟು ನಿನ್ನ ಪೂರ್ಣತೆಯನು ।
ಚೆನ್ನಾಗಿ ನೋಳ್ಪ ಕಣ್ ಎನ್ನದಾಗಿರಲಿ ॥
ನಿನ್ನ ಮೈಮೆಯನೆನ್ನ ಕಣ್ಣಿಗೆ ತೋರಿಪ ।
ಪುಣ್ಯವೆ ಅನ್ಯರದಾಗಿರಲೆಂದಿಗು ॥ ೩ ॥

## ನಿನ್ನ ನಾಟಕ

(ಮಧ್ಯಮಾವತೀ ರಾಗ—ರೂಪಕ ತಾಳ)

ನಿನ್ನ ನಾಟಕ ಚಿತ್ರವೋ ಜೀವಾಧಾರ—ಎನ್ನ ನಾಟಕ ಚಿತ್ರವೋ ॥ ಪ ॥

ಭುವನ ರಂಗದಿ ನೀನು ಭವ ರಂಗದೊಳು ನಾನು ।
ವಿವಿಧ ವೇಷಗಳಿಂದೆ ನಟಿಸಿ ತೋರಿಸುತಿಹ ॥ ಅ—ಪ ॥

ಅಮಿತ ಕಾಯವು ನಿನ್ನದು—ಮಹಾದೇವ ನೀನಿತ್ತ ತನುವೆನ್ನದು ।
ಖಗ ಮೃಗೋರಗ ಮನುಷ್ಯ ಬಹು ರೂಪ ನಿನದಾಗೆ ।
ಸೊಗಯಿಪುವೆನ್ನೊಳಾ ಬಗೆಬಗೆ ಗುಣಗಳು ॥ ೧ ॥

ಶಿಲೆ ನೆಲ ಜಲಗಳೊಳು—ನಭಸ್ಥಲ ತಾರಾ ಸಂಕುಲಗಳೊಳು ।
ಪರಿಪರಿ ಗುಣವ ನೀ ತೋರುತಲಿಹುದೆಲ್ಲ ।
ಅನುಕರಿಸುತಲಿಹೆ ದಿನಚರಿಯೊಳು ನಾನು ॥ ೨ ॥

ಕಾರುಣ್ಯವನು ತೋರುವೆ—ನಿನ್ನಂತೆಯೆ ಕ್ರೂರತನವ ತೋರುವೆ ।
ಕಟ್ಟುವೆ ಜಗಗಳನಾಳುವೆನವುಗಳ ।
ಕಟ್ಟಿಹುದನು ಒಡೆದಿನ್ನೊಂದ ಕಟ್ಟುವೆ ॥ ೩ ॥

ಅಮಿತ ಶಕ್ತಿಯು ನಿನ್ನದು—ಹೇ ಗುರುದೇವ ನೀನಿತ್ತ ಬಲವೆನ್ನದು ।
ನಿನ್ನ ನಾಟಕದುಪನಾಟಕವೆನ್ನದು ।
ಅಭಯವನೀವುದು ಅನುಚರನಿಗೆ ದೇವ ॥ ೪ ॥

# ಸ್ವಾತಂತ್ರ್ಯವೇಕೆ

(ಸಾವೇರೀ ರಾಗ—ರೂಪಕ ತಾಳ)

ಸ್ವಾತಂತ್ರ್ಯವನು ದೇವ ಏತಕೆಮಗಿತ್ತೆ ಅದು ।
ನೀತಿಯಿಂದೆಮ್ಮ ಪೇಳಿಪ ಯುಕುತಿಯೇನೈ ॥ ಪ ॥

ಚೈತನ್ಯಕಾದಿಕಾರಣನೆ ನೀನಿರಲೆಮ್ಮ ।
ಚೇತನದ ಸಾಸಂಗಳೆಲ್ಲ ಬರಿದಾಯುಸವು ॥ ಅ—ಪ ॥

ಶುಕ ಪಿಕಂಗಳಿಗೆ ನೀನತಿಮತಿಯನೀಯದಿರೆ ।
ನಲಿದು ನುಣ್ಚಾರದೊಳವು ಪಾಡಿ ಸುಳಿದಾಡಿ ।
ನಿನ್ನ ನಿಂದಿಸದೆ ಮೋಣಸ್ವರನು ಕುಂದಿಸದೆ ।
ನಿನ್ನ ರಚನೆಯ ಸೊಬಗ ತೋರ್ಪ ಹರುಷದೊಳಿರಲು ॥೧॥

ತರು ಲತೆಗಳರಿವಿನೊಳು ನರನಿಗೆಣೆಯಿರದೊಡಂ ।
ನಿನ್ನಾಣತಿಯನರಿದು ದುಗುಡಬಡದೆ ।
ಫಲ ಪುಷ್ಪಗಳ ತಳೆದು ಪರಹಿತವನೆಸಗುತಲಿ ।
ನಿನ್ನೊಲವು ಜಾಣ್ಮೆಗಳ ತೋರ್ಪ ಹರುಷದೊಳಿರಲು ॥ ೨ ॥

# ದಾರಿಗರ ಹಾಡು

(ಮೋಹನ ರಾಗ—ರೂಪಕ ತಾಳ)

ದಾರಿಹೋಕರು ನಾವು ಊರ ತೊಡಕಿಗೆ ನಮ್ಮ ।
ಸೇರಿಸದೆ ಬಿಡಿರಿ ಸಖರೇ ॥ ಪ ॥

ದೂರದಿಂದಲಿ ಬಂದು ಊರ ಸತ್ರದಿ ನಿಂದು ।
ಸಾರುವೆವು ಮುಂದಕಿಂದು—ಸಖರೇ ॥ ಅ—ಪ ॥

ಗುರುಗಳಾಣತಿಯಂತೆ ಚರಿಸುತಿರುವರು ನಾವು ।
ಇರಲಾಗದೆರಡುದಿನವೊಂದೆಡೆಯೊಳುಂ ॥
ಕೊರತೆ ಕನಲಿಕೆಗಳನು ಮರೆಯಿಪೆಮ್ಮಯ ಬಗೆಯು ।
ಸೊರೆವೆವದನಾಲಿಪುದು ನೀಂ—ಸಖರೇ ॥ ೧ ॥

ಹೊರಟು ಮುಂಬೆಳಗಿನಲಿ ಶಿರದಿ ಭಾರವ ತಳೆದು ।
ಬಿರುಗಾಳಿ ಬೀಸುತಿರೆ ಭರದಿಂದೆ ನಡೆದು ॥
ತರಣಿಯೊಲುಮೆಯ ಪಡೆದು ಹರುಷದಿಂ ಮುಂಬರಿದು ।
ತೊರೆಯೊಂದ ಕಂಡೆವತ್ತ—ಸಖರೇ ॥ ೨ ॥

ತೊರೆಯ ನೀರೊಳು ಮಿಂದು ಮರದ ನೆರಳಲಿ ಕುಳಿತು ।
ಶಿರದ ಬುತ್ತಿಯ ತಂಗಳೂಟವುಂಡು ॥
ಬಳಿಯ ತರುಗಳ ಬಳಸಿ ದೊರೆತ ಫಲಗಳ ಭುಜಿಸಿ ।
ಬಳಲಿ ಮಲಗಿದೆವತ್ತಲೇ—ಸಖರೇ ॥ ೩ ॥

ಖಗಕುಲದ ಕಲರವಂ ಬಗೆಬಗೆಯ ಪರಿಮಳಂ ।
ಮಿಗೆ ಸಂತಸವ ಸೂಸೆ ಮೈಯ್ಯು ಮರೆತು ॥
ಸೊಗದಿ ನಿದ್ರಿಸಿ ಬಳಿಕಲೆಚ್ಚೆತ್ತು ನೀರ್ಗುಡಿದು ।
ಮಗುಳೆ ನಡೆದೆವು ಮುಂದಕೆ—ಸಖರೇ ॥ ೪ ॥

ತೆರಳಿ ಮುಂದಕೆ ಮುನ್ನ ಕರುಣಿಸಿದ ದಿನಪತಿಯ ।
ಕಿರಣಗಳ್ ಕನಲಿ ಬೇಯಿಸೆ ನಮ್ಮ ತನುವ ॥
ಮರದ ನೆರಳನು ಬಯಸಿ ಮುಗಿಲ ರಾಶಿಯನರಸಿ ।
ನಿರುಕಿಸಿದೆವಾಗಸವನು—ಸಖರೇ ॥ ೫ ॥

ಮುಗಿಲು ತಾನೊಂದೊಗೆದು ತಂಬೆಲರುಗಳನೆಸೆದು ।
ಗಗನವೆಲ್ಲವ ಕವಿಯೆ ಸಲಿದು ನಡೆದು ॥
ಮಿಂಚೆಸೆದು ಸಿಡಿಲಿರಿದು ಮಳೆಗರೆಯೆ ನಾವಾಗ ।
ನಡನಡುಗಿ ನಡೆನಡೆದೆವೈ—ಸಖರೇ ॥ ೬ ॥

ನಡೆದು ಬಂದೀಯೂರ ಗುಡಿಯ ಸತ್ರವ ಸೇರಿ ।
ಬಡದಾರಿಗರ ಹಲಬರನು ಕಂಡೆವು ॥
ಕೂಡಿ ನಾವವರೊಡನೆ ಪಾಡಿ ಸುದ್ದಿಗಳಾಡಿ ।
ಬಿಡುವೆವಿಲ್ಲಿಯೆ ನಿಶಿಯನು—ಸಖರೇ ॥ ೭ ॥

ಹೊರಟು ನಾವಿಲ್ಲಿಂದಲರುಣೋದಯದಿ ಮರಳಿ ।
ಭರದಿಂದ ಕಾಲಿಡುತ ಮರೆತು ಬಳಲಿಕೆಯ ॥
ಪರಿಪರಿಯ ನೋಟಗಳ ನೋಡಿ ರಾಗದಿ ಪಾಡಿ ।
ಸರಿವೆವಿನ್ನೊಂದೂರಿಗೆ—ಸಖರೇ ॥ ೮ ॥

ಪಯಣವನು ನಾವಿಂತು ಗೈಯುತಿಹೆವನುದಿನವು ।
ಬಯಕೆಗಳು ನಿಲವೆಮ್ಮಳರೆಗಳಿಗೆಯುಂ ॥
ಭಯವನರಿಯೆವು ಸಾಹಸಕ್ಕೆ ತೊಡಗೆವು ನಿಮ್ಮ ।
ದಯೆಯೊಂದೆ ಸಾಕು ನಮಗೆ—ಸಖರೇ ॥ ೯ ॥

ಊರುಗಳ ಸುತ್ತಿಹೆವು ಕೇರಿಗಳ ತಿರುಗಿಹೆವು ।
ಊರಿಗರ ಜಪ ತಪಂಗಳನರಿತೆವು ।
ಊರಿನಲ್ಲಿರುವೆಲ್ಲುದಾರತೆಯ ಸವಿದಹೆವು ।
ಊರು ಸಾಕಿನ್ನು ನಮಗೆ—ಸಖರೇ ॥ ೧೦ ॥

ಅಳುವವರ ಕಂಡಿಹೆವು ನಗುವವರ ಕಂಡಿಹೆವು ।
ಕಂಡಿರುವೆವಳುಕಿಪರನಳುಕದವರನು ॥
ದುರುಳರನು ಕಂಡಿಹೆವು ಮರುಳರನು ಕಂಡಿಹೆವು ।
ಕಂಡಿಹೆವು ಒಲ್ಲವರನು—ಸಖಿರೇ ॥ ೧೧ ॥

ನೋಡಿಹುದೆ ಸಾಕು ನಿಮ್ಮೊಡಾಟಗಳನಿನ್ನು ।
ಗೂಡ ಸೇರುವ ಹಕ್ಕಿಯಂತೆ ನಾವು ॥
ಸಾರಿ ಮುಂದಕೆ ಜವದಿ ಸೇರಿ ನಮ್ಮಾಲಯವ ।
ಭಾರಗಳನಿಳುಹಬೇಕೈ—ಸಖಿರೇ ॥ ೧೨ ॥

ಹಳ್ಳಗಳ ಮುಚ್ಚುತ್ತ ಮುಳ್ಳುಗಳ ಬಿಸುಡುತ್ತ ।
ಒಳ್ಳೆದಾರಿಯ ತೋರಿ ಯಾತ್ರಿಕರಿಗೆ ॥
ಒಳ್ಳೊಳ್ಳೆ ಕಥೆಗಳನು ಹೇಳುತ್ತ ಕೇಳುತ್ತ ।
ತಳ್ಳುವೆವು ಚಿಂತೆಗಳನು—ಸಖಿರೇ ॥ ೧೩ ॥

ಇಂತೆನಗಬೇಕೆಂಬ ಹಟದ ಬಂಧನವಿಲ್ಲ ।
ಬಂಧವದು ಕಡಿದೆಂಬ ಭೀತಿಯಿಲ್ಲ ॥
ಅಂತರಂಗದೊಳು ನಾವಾಂತು ಗುರುಗಳ ಪದವ ।
ಸಂತಸಿಪೆವವರ ನುಡಿಯಿಂ—ಸಖಿರೇ ॥ ೧೪ ॥

ಬಿದಿಯಣಕಿಪುದ ಕಂಡು ಹೆದರುವರು ನಾವಲ್ಲ ।
ಎದುರುಗೊಳ್ಳುವೆವದನು ವಿನಯದಿಂದೆ ॥
ಎದೆಯೊಳಿಹುದೆಮಗೊಂದು ಸುಧೆಯ ಸಾರದ ಬಿಂದು ।
ಅದ ಸವಿಯುತಳುಕದಿಹೆವೈ—ಸಖಿರೇ ॥ ೧೫ ॥

ಕಂಡುಕಂಡುದನೆಲ್ಲ ಬೇಡುವರು ನಾವಲ್ಲ ।
ಉಂಡು ಸುಖಿಪೆವು ಕೈಗೆ ಬಂದ ಫಲವ ॥
ಎಮ್ಮ ಸುಖವೆಮಗಿಹುದು ನಿಮ್ಮ ದುಗುಡವು ನಿಮಗೆ ।
ನಿಮ್ಮೂರು ನಮಗೆ ಸಾಕೈ—ಸಖಿರೇ ॥ ೧೬ ॥

---

ಬೆಂಗಳೂರು ಸಿಟಿ, ಮೈಸೂರು ರೋಡು
ಬೆಂಗಳೂರು ಪ್ರೆಸ್ಸಿನಲ್ಲಿ ಮುದ್ರಿತವಾಗಿದೆ—೧೯೩೪.